ಶ್ರೀ ಅಮರೇಗೌಡ ಬಯ್ಯಾಪುರ್ :– DDPI ಗಳು ಈ ರೀತಿ ಮಾಡುತ್ತಾರೆಂದು ನಾವು ಈ ಬಗ್ಗೆ ಕಾರ್ಯದರ್ಶಿಗಳಿಗೆ, ಆಯುಕ್ತರಿಗೆ ಫೋನ್ ಮಾಡಿ ಅವರ ಕಡೆಯಿಂದ ನಿರ್ದೇಶನ ಕೊಡಿಸಿದರೂ ಕೆಲಸ ಆಗಲಿಲ್ಲವೆಂದರೆ ಅವರು ಏತಕ್ಕೆ ಇರಬೇಕು?

ಶ್ರೀ ಬಸವರಾಜ ಹೊರಟ್ಟಿ :– ಅಂತಹ ಅಧಿಕಾರಿಗಳು ತಪ್ಪು ಮಾಡಿದ್ದರೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ ಅವರು ಹೇಳಲಿ. ಅಧಿಕಾರಿಗಳಿಗೆ strict ಆಗಿ ಇನ್ನೊಂದು ಸಲ ನಿಯಮಗಳನ್ನು ಕಡ್ಡಾಯವಾಗಿ ಜಾರಿಗೊಳಿಸುವ ಬಗ್ಗೆ ಆರ್ಡರ್ ಮಾಡುತ್ತೇನೆ.

ಶ್ರೀ ಕುಡಚಿ ರಮೇಶ್ ಲಕ್ಷ್ಮಣ್ :– ತಮ್ಮ ಮೂಲಕ ಮಾನ್ಯ ಶಿಕ್ಷಣ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ ಪ್ರಾಥಮಿಕ ಶಾಲೆ ಅಥವಾ ಮಾಧ್ಯಮಿಕ ಶಾಲೆಗಳಲ್ಲಿ ಟೀಚರ್ಸ್ ಮತ್ತು ಹೆಡ್ ಮಾಸ್ಟರ್ಸ್‌ನ್ನು ಕೊಟ್ಟಿದ್ದಾರೆ. ಆದರೆ ಲೆಕ್ಕಪತ್ರಗಳನ್ನು ಮಾಡುವುದಕ್ಕೆ ನಾನ್ ಟೀಚಿಂಗ್ ಸಿಬ್ಬಂದಿಯನ್ನು ಏತಕ್ಕೆ ಕೊಡುತ್ತಿಲ್ಲ? ನಾನು ರಾಯಬಾಗ್ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ನೋಡುತ್ತಿದ್ದೇನೆ. ಇಡೀ ಕರ್ನಾಟಕ ರಾಜ್ಯದಲ್ಲಿ ಈ ನಾನ್ ಟೀಚಿಂಗ್ ಸಿಬ್ಬಂದಿಯನ್ನು ಕೊಟ್ಟಿರಲಿಕ್ಕಿಲ್ಲ. ಆದ್ದರಿಂದ ಸರ್ಕಾರ ಈ ಬಗ್ಗೆ ಗಮನಹರಿಸಬೇಕು. ಈಗ ಟೀಚರ್ಸ್ ಮತ್ತು ಹೆಡ್ ಮಾಸ್ತರ್‌ಗಳು ತಮ್ಮ ಲೆಕ್ಕಪತ್ರಗಳನ್ನು ತೆಗೆದುಕೊಂಡು ಬಿಇಓ ಆಫೀಸ್‌ಗೆ 25 ಕಿಲೋಮೀಟರ್ ದೂರ ಹೋಗಬೇಕಾಗುತ್ತದೆ. ಇದರಿಂದ ಟೀಚಿಂಗ್ ಸಿಬ್ಬಂದಿ ಕಡಿಮೆಯಾಗಿದೆ. ತಾವು ಡೆಪ್ಯುಟೇಷನ್ ಮಾಡುವುದಕ್ಕಿಂತ ಈ ಕ್ಲರಿಕಲ್ ಸಿಬ್ಬಂದಿಯನ್ನು ಪ್ರಾಥಮಿಕ ಶಾಲೆಗಳಿಗೆ ಮತ್ತು ಮಾಧ್ಯಮಿಕ ಶಾಲೆಗಳಿಗೆ ಕೊಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಎಸ್. ಹೊರಟ್ಟಿ :– ಮಾನ್ಯ ಅಧ್ಯಕ್ಷರೇ, ಆರ್ಥಿಕ ಮಿತ ಆದೇಶವನ್ನು ಸಡಿಲಿಸದೇ ಇರುವ ಕಾರಣ ಅವರು ಹೇಳಿದ ಮಾತು ನಿಜ. ಹಣಕಾಸು ಇಲಾಖೆಯನ್ನು ಕೇಳಿದ್ದೇವೆ. ಶಾಲೆಗಳಲ್ಲಿ ಕ್ಲರ್ಕ್‌ಗಳು ಇಲ್ಲ. ಪಿವನ್ಸ್ ಇಲ್ಲವೆಂದು ಹೇಳಿದ್ದಾರೆ ಅವೆಲ್ಲವನ್ನು ಆರ್ಥಿಕ ಇಲಾಖೆ ಮೂಲಕ ಅನುಮತಿಯನ್ನು ಪಡೆದು ತಕ್ಷಣ ಅನುಮತಿಯನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇನೆ.

ಕರ್ನಾಟಕ ಗೃಹ ಮಂಡಳಿ

365 (2442) ಶ್ರೀ ಪಾಟೀಲ್ ಬಿ. ಆರ್ (ಆಳಂದ) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕರ್ನಾಟಕ ಗೃಹ ಮಂಡಳಿ ಗುಲ್ಬರ್ಗಾ ನಗರದ ಬುದ್ಧ ವಿಹಾರದ ಹತ್ತಿರ ವಸತಿ ನಿರ್ಮಾಣ ಮಾಡುವುದಕ್ಕೆ ಮತ್ತು ನಿವೇಶನಕ್ಕೆ ಜಮೀನು ಖರೀದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಖರೀದಿಸಿದ್ದರೆ ಅಥವಾ ಖರೀದಿಸುತ್ತಿದ್ದರೆ ಎಷ್ಟು ಬೆಲೆಯನ್ನು ಒಂದು ಎಕರೆಗೆ ನಿಗದಿ ಪಡಿಸಲಾಗುತ್ತಿದೆ ಇದಕ್ಕೆ ಆಧಾರವೇನು;

3) ಹತ್ತಿರದಲ್ಲಿಯೇ ವಿಮಾನ ನಿಲ್ದಾಣಕ್ಕೆ ಜಮೀನು ಪಡೆದಿದ್ದು ಅದರ ಬೆಲೆ ಎಷ್ಟೆಂಬುದನ್ನು ಸರ್ಕಾರ ಪರಿಗಣನೆಗೆ ತೆಗೆದುಕೊಂಡು ಖರೀದಿಸಿದೆಯೇ?

ಶ್ರೀ ಡಿ.ಟಿ ಜಯಕುಮಾರ್ (ವಸತಿ ಸಚಿವರು) :

1) ಸರ್ಕಾರದ ಗಮನಕ್ಕೆ ಬಂದಿದೆ.

2) ಕರ್ನಾಟಕ ಗೃಹ ಮಂಡಳಿಯು ಖರೀದಿಸುತ್ತಿರುವ ಜಮೀನಿನ ಬೆಲೆಯನ್ನು ಗುಲ್ಬರ್ಗಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಭೂ–ಖರೀದಿ ಸಮಿತಿ ಶಿಫಾರಸ್ಸು ಮಾಡಿದ ಬೆಲೆಯ ಬಗ್ಗೆ ಮಂಡಳಿ ಸಭೆಯಲ್ಲಿ ಚರ್ಚಿಸಿ ಕರ್ನಾಟಕ ಗೃಹ ಮಂಡಳಿ ಕಾಯ್ದೆ ಕಲಂ 33 (1) ರಡಿಯಲ್ಲಿ ಬೆಲೆ ನಿಗದಿಗೊಳಿಸಲಾಗಿದೆ. ಈ ಬೆಲೆಗೆ ಸರ್ಕಾರದ ಅನುಮೋದನೆ ಪಡೆದು ಜಮೀನು ಖರೀದಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಜಮೀನಿಗೆ ಪ್ರತಿ ಎಕರೆಗೆ 1ಕ್ಕೆ ರೂ.8.90 ಲಕ್ಷದಂತೆ ಬೆಲೆ ನಿಗದಿಯಾಗಿದೆ.

3) ವಿಮಾನ ನಿಲ್ದಾಣಕ್ಕಾಗಿ 2003–04ನೇ ಸಾಲಿನಲ್ಲಿ ಕೆ.ಐ.ಡಿ.ಬಿ. ಭೂ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಭೂ–ಖರೀದಿ ಸಮಿತಿ ಸಭೆಯು ಪ್ರತಿ ಎಕರೆಗೆ 1.25 ಲಕ್ಷ ದರದಲ್ಲಿ ನಿಗದಿಗೊಳಿಸಿರುತ್ತದೆ. ಆದರೆ ಭೂ–ಮಾಲೀಕರು ಈ ಬೆಲೆಗೆ ಜಮೀನು ನೀಡಲು ಸಮ್ಮತಿಸಿರುವುದಿಲ್ಲ. ಕೆ.ಐ.ಡಿ.ಬಿ. ಜಮೀನು ಗುಲ್ಬರ್ಗಾ ನಗರದಿಂದ ಸುಮಾರು 15–00 ಕಿ.ಮೀ ದೂರದಲ್ಲಿರುತ್ತದೆ. ಕರ್ನಾಟಕ ಗೃಹ ಮಂಡಳಿಯು ಖರೀದಿಸುತ್ತಿರುವ ಜಮೀನು ಗುಲ್ಬರ್ಗಾ ನಗರಕ್ಕೆ ಹತ್ತಿರವಾಗಿದ್ದು ಸಿ.ಡಿ.ಪಿ. ವ್ಯಾಪ್ತಿಯಲ್ಲಿರುವುದರಿಂದ ಜಿಲ್ಲಾ ಭೂ–ಖರೀದಿ ಸಮಿತಿ ಸಭೆಯು ಪ್ರತಿ ಎಕರೆಗೆ ರೂ.9.50 ಲಕ್ಷ ನಿಗದಿಗೊಳಿಸಿರುತ್ತದೆ. ಕರ್ನಾಟಕ ಗೃಹ ಮಂಡಳಿ ಸಭೆಯಲ್ಲಿ ಚರ್ಚಿಸಿ ಅಂತಿಮವಾಗಿ ಪ್ರತಿ ಎಕರೆಗೆ ರೂ.8.90 ಲಕ್ಷದಂತೆ ದರ ನಿಗದಿಗೊಳಿಸಲಾಗಿದೆ.

ಶ್ರೀ ಬಿ.ಆರ್. ಪಾಟೀಲ್ :– ಮಾನ್ಯ ಅಧ್ಯಕ್ಷರೇ, ವಸತಿ ಸಚಿವರ ಪರವಾಗಿ ತಾವೇ ಉತ್ತರ ಕೊಡುತ್ತಿರಲ್ಲ.

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ವಸತಿ ಸಚಿವರ ಪರವಾಗಿ ನಾನು ಉತ್ತರ ಕೊಡುತ್ತೇನೆ. ಅವರು ಕೂಡ ಪತ್ರ ಬರೆದಿದ್ದಾರೆ. ಇವತ್ತು ಸ್ವಾಮಿಗಳ ಪಾರ್ಥಿವ ಶರೀರಕ್ಕೆ ನಮನ ಹೇಳಲು ಮಾನ್ಯ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಹೋಗಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್ :– ಅಭ್ಯಂತರವಿಲ್ಲ. ಗುಲ್ಬರ್ಗದಲ್ಲಿ ಕರ್ನಾಟಕ ಗೃಹ ಮಂಡಳಿಯವರು ಗುತ್ತಿಗೆಹಾರದ ಹತ್ತಿರ ಒಂದು ದೊಡ್ಡ ಸಮುಚ್ಛಯವನ್ನು ಕಟ್ಟುವುದಕ್ಕೆ ಹೊರಟಿದ್ದಾರೆ. ಅದು ಎಷ್ಟು ಎಕರೆ ಎಂದು ತಾವು ಹೇಳಿಲ್ಲ. ಅದನ್ನು ತಾವು ತಿಳಿಸಬೇಕು. ಮತ್ತು ಈಗಾಗಲೇ Air port ಗೆ 1,25 ಸಾವಿರ ರೂಪಾಯಿಗೆ ಖರೀದಿ ಮಾಡಿದಿರಿ. ಆದರೆ ಈ ಗೃಹ ಮಂಡಳಿಯವರು ತೆಗೆದುಕೊಂಡಂತಹ ಜಾಗ 8 ಲಕ್ಷ, 90 ಸಾವಿರ. ಅವರು ಹೇಳುತ್ತಾರೆ ಅದು 15 ಕಿಲೋಮೀಟರ್ ದೂರವಿದೆ ಎಂದು ಹಾಗೂ ಇದು ಹತ್ತಿರವಿದೆ ಎಂದು. ಬಹಳ ಅತ್ಯುತ್ತಮವಾವ ಬುದ್ಧ ವಿಹಾರ ಇಡೀ ದಕ್ಷಿಣ ಭಾರತದಲ್ಲಿ ಎಲ್ಲೂ ಇಲ್ಲ. ಅಂತಹ ಒಂದು ಬುದ್ಧ ವಿಹಾರವನ್ನು ಅವರು ಕಟ್ಟುತ್ತಿದ್ದಾರೆ. ಅಲ್ಲಿ 3 ಲಕ್ಷಕ್ಕಿಂತ ಜಾಸ್ತಿ, ಸಹರಾ ಇಂಡಿಯಾದವರು ಒಂದು ಏರಿಯಾ ಡೆವಲಪ್ ಮಾಡುತ್ತಿದ್ದಾರೆ. ಅವರು 5 ಲಕ್ಷ ಕೊಟ್ಟಿದ್ದಾರೆ. ಒಂದು ಕಮರ್ಷಿಯಲ್ ಆರ್ಗನೈಜೆಶನ್ ಅಷ್ಟು ಕೊಟ್ಟಿರಬೇಕಾದರೆ ಹೌಸಿಂಗ್ ಬೋರ್ಡ್‌ನವರು 8 ಲಕ್ಷ 90 ಸಾವಿರ ಕೊಟ್ಟಿದ್ದರೆ ನಾವು ಅವರ ಪ್ರಾಮಾಣಿಕತೆ ಬಗ್ಗೆ ಕಳಕಳಿಯನ್ನು ಅನೇಕ ಸಲ ವ್ಯಕ್ತಪಡಿಸುತ್ತೇವೆ. ಇದು ಯಾವ ಲೆಕ್ಕ? ದಯಮಾಡಿ ಮಾನ್ಯ ಮಂತ್ರಿಗಳು ಇದನ್ನು ಯಾವ ಆಧಾರದ ಮೇಲೆ ಕೊಟ್ಟರು ಎಂದು ಉತ್ತರ ಕೊಡಬೇಕು.

ಶ್ರೀ ಎನ್. ಭೋಸರಾಜ್ :– ಮಾನ್ಯ ಅಧ್ಯಕ್ಷರೇ, ಇದೇ ರೀತಿ ಗೃಹ ಮಂಡಳಿಯವರು ಒಂದು ಗ್ಯಾಂಗ್ ತಯಾರು ಮಾಡಿ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಮಾಡುತ್ತಿದ್ದಾರೆಂದು ಇವತ್ತು ಬೆಳಕಿಗೆ ಬಂದಿದೆ. ಪತ್ರಿಕೆಗಳಲ್ಲಿ ಬಂದಿದೆ. ನನ್ನ ಕ್ಷೇತ್ರದ ಮಾನವಿಯಲ್ಲಿ ಮಾನವಿ ಪಟ್ಟಣದ ನಾಲ್ಕುವರೆ ಕಿಲೋಮೀಟರ್ ದೂರದಲ್ಲಿ ರೈತರಿಂದ ಖರೀದಿ ಮಾಡತಕ್ಕಂತಾದ್ದು 40–50 ಸಾವಿರ ರೂಪಾಯಿಗಳಿಗೆ, ಖುಷ್ಕಿ ಭೂಮಿ. ಇದು ನಮ್ಮ ಶಾಸಕರಿಗೂ ಗೊತ್ತಿಲ್ಲ, ಸಾರ್ವಜನಿಕರಿಗೆ ಗೊತ್ತಿಲ್ಲ. ನಾಲ್ಕು ಜನ ಸೇರಿಕೊಂಡು ಅಲ್ಲಿರುವ ಇಂಜಿನೀಯರ್ಸ್ ಎಲ್ಲರೂ ಸೇರಿ 5 ಲಕ್ಷ 30 ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿ Registration ಮಾಡಿ ನಂತರ ಯಾರು ಸೇಲ್ ಮಾಡಿದ್ದಾರೆ ಅವರಿಗೆ ಒಂದು ಲಕ್ಷ ರೂಪಾಯಿಯಂತೆ ಅವರ ಕೈಗೆ ಕೊಟ್ಟು ಉಳಿದ 4 ಲಕ್ಷ ರೂಪಾಯಿಗಳನ್ನು ಅವರಿಟ್ಟುಕೊಂಡು ಈ ರೀತಿ 80 ಎಕರೆ ಭೂಮಿಯನ್ನು ಖರೀದಿ ಮಾಡಿದ್ದಾರೆ. ಈಗಾಗಲೇ ಅದು ಬೆಳಕಿಗೆ ಬಂದಿದೆ. ಗಲಾಟೆಯಾಗಿ ಪತ್ರಿಕೆಗಳಲ್ಲಿ ಬಂದ ಮೇಲೆ ಒಂದು ವಾರದ ಹಿಂದೆ ತಮ್ಮ ಇಲಾಖೆಯವರು ಅಂದರೆ ಗೃಹ ಇಲಾಖೆಯವರು ಕೇಸ್ ಸಹ ಮಾಡಿದ್ದಾರೆ. ಅದೇ ರೀತಿ ನಮಗೆ ತಿಳಿದ ಪ್ರಕಾರ ದೇವಗಿರಿ, ಶಹಬಾದ್, ಯಾದಗಿರಿ, ಇನ್ನಿತರೆ ಕಡೆಗಳಲ್ಲಿ ಆಗಿದೆ. ರೈತರಿಂದ ತೆಗೆದುಕೊಂಡು ಅದಕ್ಕೆ 5 ಲಕ್ಷ ರೂಪಾಯಿ Value fix up ಮಾಡಿಸಿ, ಅದನ್ನು ಖರೀದಿ ಮಾಡಿ ಹೆಚ್ಚು ಕಡಿಮೆ ರಾಯಚೂರಿನ ಬಹಳ ಕಡೆ ಅಧಿಕಾರಿಗಳು ಮಾಡುತ್ತಿದ್ದಾರೆ ಅಂತ

ವರ್ತಮಾನವಿದೆ. ಹಾಗಾಗಿ rate fixation ಮಾಡುವ authority ಜಿಲ್ಲಾಧಿಕಾರಿಗಳದ್ದು, ಆದರೆ ಆಶ್ರಯಕ್ಕೆ ಜಾಗ ಕೇಳಿದರೆ, 50,60,70 ಸಾವಿರಕ್ಕೆ ಭೂಮಿ ಸಿಕ್ಕುವುದಿಲ್ಲ ಅಂತ ಅದೇ ಜಿಲ್ಲಾಧಿಕಾರಿ ಹೇಳುತ್ತಾರೆ. ಆದರೆ ಇದರಲ್ಲಿ ಜಿಲ್ಲಾಧಿಕಾರಿಗಳು rate fix ಮಾಡಿದ್ದರೋ ಇಲ್ಲವೋ ಎಂಬುದೂ verify ಆಗಬೇಕಾಗುತ್ತದೆ. ಹಾಗಾಗಿ ಮಾನ್ವಿ ಪ್ರದೇಶದಲ್ಲಿ ಗೃಹಮಂಡಳಿ ಖರೀದಿ ಮಾಡಿರುವ 80 ಎಕರೆ ವಿಚಾರದಲ್ಲಿ .5 ಕೋಟಿ ರೂ. ವ್ಯವಹಾರವಾಗಿದೆ. ದಯವಿಟ್ಟು ತಾವು ಅದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ :– ಮೊದಲನೆಯದಾಗಿ ರೈತರಿಗೆ ಕೊಡುವ ದುಡ್ಡಿಗೆ ಯಾರಿಗೋ ಜಾಸ್ತಿಯಾಗುತ್ತದೆ ಅಂತ 9 ಲಕ್ಷ ಕೊಟ್ಟಿದ್ದಾರೆ. ಒಂದು ಸಾರಿ ರೈತ ಜಮೀನು ಕಳೆದುಕೊಂಡರೆ ಮತ್ತೆ ಅವನು ಜಮೀನು ತಗೊಳ್ಳೋಕೆ ಕಷ್ಟ. ಬಿ.ಆರ್. ಪಾಟೀಲರ ಅಭಿಪ್ರಾಯ ಏನಿದೆಯೋ ನನಗೆ ಗೊತ್ತಿಲ್ಲ. ಆದರೆ ರೈತರಿಗೆ ನೇರವಾಗಿ 8.90 ಲಕ್ಷ ಸೇರಿದ್ದರೆ ಆ ರೈತರು ಮತ್ತೆ ಜಮೀನು ಮಾಡುವುದಕ್ಕಾಗುವುದಿಲ್ಲ. ಈ ಭೂಸ್ವಾಧೀನ ಮಾಡುವುದನ್ನು ಕಿತ್ತು ಹಾಕಿಬಿಡಿ. ಪಶ್ಚಿಮ ಬಂಗಾಳದಲ್ಲಿ ಹೇಗೆ ಪ್ರತಿಭಟನೆಗಳಾಗುತ್ತಿದೆಯೋ ಅದಕ್ಕೆ ನಾವೆಲ್ಲರೂ ಸ್ಪಂದಿಸಬೇಕಾಗುತ್ತದೆ. ರೈತರ ಜಮೀನು ಅಂದರೆ ಯಾರು ಬೇಕಾದರೂ ತಗೊಳೋದೆ. ಆದರೆ ಬೆಂಗಳೂರಿನಲ್ಲಿ ಏನಾದರೂ ಇಷ್ಟು ಜಮೀನು ಕೊಡಬೇಕು ಅಂದರೆ 70 ಸಾವಿರ ಯೋಚನೆ ಮಾಡುತ್ತೀರಿ. ಆದರೆ ರೈತನಿಗೆ ಜಾಸ್ತಿ ದುಡ್ಡು ಸಿಗುವ ಹಾಗಿದ್ದರೆ ಅವನ ಭೂಮಿ ಕೊಳ್ಳುವ ಕೆಲಸ ಯಾವುದೇ ಸರ್ಕಾರ ಮಾಡಲಿ.

ಶ್ರೀ ಶಿವಾನಂದ ಪಾಟೀಲ್ :– ಅಧ್ಯಕ್ಷರೇ, ಇದೊಂದು ದೊಡ್ಡ scandal. ಆ ರೈತನಿಗೆ 8 ಲಕ್ಷ ಇವರು ಕೊಟ್ಟಿರುವುದಿಲ್ಲ. ಇದರಲ್ಲಿ D C involve ಆಗಿರುತ್ತಾನೆ. Housing Board Commissioner involve ಆಗಿರುತ್ತಾರೆ. 5 ಲಕ್ಷವೂ ರೈತನಿಗೆ ಕೊಟ್ಟಿರುವುದಿಲ್ಲ 8 ಲಕ್ಷ ಕೊಟ್ಟಿದ್ದೇವೆ ಅಂತ ಬರೆದುಕೊಂಡಿರುತ್ತಾರೆ. ನಮ್ಮ ಬಿಜಾಪುರದಲ್ಲೂ ಆಗಿದೆ, 70 ಸಾವಿರ ರೂ. ಜಮೀನನ್ನು 5 ಲಕ್ಷಕ್ಕೆ ಖರೀದಿ ಮಾಡಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಅಧ್ಯಕ್ಷರೇ, Unfortunately, ನನ್ನ ಸ್ನೇಹಿತರು ಅವರು raise ಮಾಡಿದ point ಮಿಸ್ ಮಾಡಿಕೊಂಡರು. State ನಲ್ಲಿ Acqusition Law ಇದೆ. As well as there is a Central Act. Supreme Court ನಲ್ಲಿ ಇತ್ತೀಚೆಗೆ decision ಆಗಿದೆ. Market Value ಏನಿದೆ ಅದನ್ನು ಕೊಟ್ಟು acquire ಮಾಡಬೇಕು ಅಂತ. ಮೊದಲು ಕಡಿಮೆ value ಗೆ ಮಾಡುತ್ತಾ ಇದ್ದರು, ಈಗ ಅದಕ್ಕೆ ಅವಕಾಶ ಇಲ್ಲ. Market Value ಹೇಗೆ ಗೊತ್ತಾಗುವುದು ನಿಮಗೆ? Sub-Registrar's office ನಲ್ಲಿ.

ಅಲ್ಲಿ time to time market value revise ಮಾಡಿ ಇಷ್ಟಿದೆ ಅಂತ ಹೇಳುತ್ತಾರೆ. ಕೆಲವು ದೊಡ್ಡ transactions cases ನಲ್ಲಿ Sub-Registrar register ಮಾಡಿದರೂ ಕೂಡ, the document has to go to District Registrar. ಅವನ್ನೆಲ್ಲ ನೋಡಿ stamp duty realized correctly ಅಂತ ಅಂದರೇನೆ document release ಮಾಡುವುದು. ಪಾಟೀಲರು ಎತ್ತಿರುವುದೇನೆಂದರೆ ಅಲ್ಲಿ ಇಲ್ಲದೇ ಇರುವ ಒಂದು ಉತ್ಪ್ರೇಕ್ಷಿತ ಬೆಲೆ ಉಂಟು ಮಾಡಿ ಇವರೊಂದು ಗ್ಯಾಂಗ್ create ಮಾಡಿಕೊಂಡು ರೈತನಿಗೆ ಹೋಗೋ ಹಣ ಲೂಟಿ ಮಾಡುತ್ತಿದ್ದಾರೆ ಅಂತ. ರೈತನಿಗೆ ಹೋದರೆ ನಾವು ಆನಂದಪಡುತ್ತೇವೆ. ಇದೊಂದು ದಂಧೆ ಮಾಡಿಕೊಂಡಿದ್ದಾರೆ. Acquisition is the main profession in Industrial Area Development Board, Housing Board and people who are lacking integrity, acutely, get these creamy postings. They deliberately choose to go to these places. Their main job is to mint money and there are a set of fellows in bureaucratic set up, whichever be the Government, JD(S), Congress, BJP, or Republican Party, ನಿರಂತರವಾಗಿ, they have survived. They have been looting the Government. ನಾನು ನಿಮಗೆ ಏನು ಹೇಳುತ್ತೇನೆ, kindly be generous. Order an inquiry into this by CoD. Let some of these fellows get entangled. ಸತ್ಯ ಹೊರಗೆ ಬರಲಿ., We are not interested in defending anybody. ಯಾರು ಈ ಅವಿವೇಕಿಗಳೆಲ್ಲ ಇದ್ದಾರೆ ಕಡೇ ಪಕ್ಷ ಇಂತಿಂಥವರು ಹೀಗೆ ಅಂತ ಒಂದು ಪಟ್ಟಿಯಾದರೂ ಇದ್ದರೆ ಮುಂದಕ್ಕೆ posting ಕೊಡುವಾಗಲಾದರೂ. DPAR ನವರು, they can caution. ಇಂಥವರನ್ನು ಇಂಥ ಹುದ್ದೆಗೆ ಹಾಕಬೇಡ್ರಿ ಅಂತ ಹೇಳೋಕಾದರೂ ಆಗುತ್ತದೆ. The whole object of discussing this issue is to cleanse the public life, to clean the administration. ಆ ದೃಷ್ಟಿಯಿಂದ, I have given my suggestion.

ಶ್ರೀ ಎಂ.ಪಿ. ಪ್ರಕಾಶ್ :– ಅಧ್ಯಕ್ಷರೇ ಬಹಳ ಮುಖ್ಯವಾದ ವಿಷಯಗಳನ್ನು ಪ್ರಸ್ತಾಪ ಮಾಡಲಾಗಿದೆ. ಇದಕ್ಕೆ ಯಾಕೆ ಹೆಚ್ಚು ಕೊಟ್ಟಿದ್ದಾರೆ, ಯಾಕೆ ಕಮ್ಮಿಯಾಗಿದೆ ಎನ್ನುವುದಕ್ಕೆ ಉತ್ತರ ಕೊಡುವುದಕ್ಕೆ ಪೂರ್ವದಲ್ಲಿ ಬೋಸರಾಜವಾಗಲಿ ಶಿವಾನಂದ ಪಾಟೀಲರಾಗಲಿ ರಮೇಶಕುಮಾರ್ ಆಗಲಿ ಎತ್ತಿರುವುದರಲ್ಲಿ, ಮಧ್ಯವರ್ತಿಗಳು active ಆಗಿರುವುದು ಬಹಳ ಮುಖ್ಯ. ರೈತರಿಗೆ ನೇರವಾಗಿ ಹಣ ಹೋಗುವುದಾಗಿದ್ದರೆ ಅದಕ್ಕೆ ಯಾರೂ ಅಸೂಯೆಪಡುವಂಥದು ಇಲ್ಲ. ಆದರೆ ಮಧ್ಯವರ್ತಿಗಳು ರೈತರ ಬಳಿ ಯಾವುದೋ ಒಂದು ಕರಾರುಪತ್ರ ಬರೆಸಿಕೊಂಡೋ ಅಥವಾ ಅವರ ಕಷ್ಟಪರಿಸ್ಥಿತಿಯನ್ನೋ ಅವರಿಗೆ

ತಿಳಿವಳಿಕೆಯಿಲ್ಲದಿರುವುದನ್ನೋ ದುರುಪಯೋಗ ಮಾಡಿಕೊಂಡು ಇಂತಹ ಯೋಜನೆಗಳಲ್ಲಿ ಅವರು ಹೆಚ್ಚಿನ ಹಣ ಹೊಡೆಯುವಂಥದು, ಇದೊಂದೇ ಕಡೆ ಅಲ್ಲ ಎಲ್ಲ ಕಾಲದಲ್ಲೂ ನಡೆದುಕೊಂಡು ಬಂದಿದೆ. ಆದರೆ ಇದಕ್ಕೆ ನಾವು ಎಲ್ಲಿಯಾದರೂ ಒಂದು ಕಡೆ ಕಡಿವಾಣ ಹಾಕಬೇಕಾದ್ದು ಮುಖ್ಯ. ಆ ದೃಷ್ಟಿಯಿಂದ ನಾವು ನೇರವಾಗಿ ಚೆಕ್ ಅಥವಾ ಡಿಡಿ ಮೂಲಕ ಹಣ ಕೊಡುವ ವ್ಯವಸ್ಥೆಯಾಗಬೇಕು. ಅವರದೇನೇ ಖರೀದಿ ಕರಾರು ಇರಲಿ ಮತ್ತೊಂದೇ ಇರಲಿ ಯಾವು ಭೂಮಿ ಕಳೆದುಕೊಳ್ಳುವ ರೈತರಿಗೆ ನೇರವಾಗಿ ನಾವು ದುಡ್ಡು ಕೊಡುತ್ತೇವೆ ಅದನ್ನು ಚೆಕ್ ಮೂಲಕ ನಿಮಗೇ ಕೊಡುತ್ತೇವೆ ಅನ್ನುವ ನಿಯಮಾವಳಿ ಈಗ ಇರದೇ ಇರಬಹುದು, ನಾನು ಕರ್ನಾಟಕ ಗೃಹಮಂಡಳಿಯವರಿಗೆ ಹೇಳುತ್ತೇನೆ.

ಶ್ರೀ ಕೆ.ಆರ್. ರಮೇಶ ಕುಮಾರ್ :– ಬಹಳ ಘಾಟಿಗಳು, ಅದಕ್ಕೂ ಒಪ್ಪಿಕೊಳ್ಳುತ್ತಾರೆ, ಅವನ ಹತ್ತಿರ ಒಂದು on demand ಬರೆಸಿಕೊಳ್ಳುತ್ತಾರೆ. ಇವರು ನಿಪುಣರು.

ಶ್ರೀ ಎಂ.ಪಿ. ಪ್ರಕಾಶ್ :– ಇದರಲ್ಲಿ ಅನೇಕ ವಕೀಲರು ಭಾಗಿಗಳಾಗಿರುತ್ತಾರೆ.

ಅಧ್ಯಕ್ಷರು :– ಇದಕ್ಕೆಲ್ಲ ರಾಜಕೀಯ ಮಾಡುತ್ತಾರಲ್ಲ ಈ ಮನೆಗೆ ಬರೋರಾಗಬಹುದು, ಬರದೇ ಇರೋರಿರಬಹುದು ಇವರು ಪರಿಶುದ್ಧರಾಗುವವರೆಗೆ ಇವೆಲ್ಲ ನಿಲ್ಲಿಸೋಕೆ ಆಗುವುದಿಲ್ಲ.

ಶ್ರೀ ಎನ್. ಬೋಸರಾಜು :– 15 ದಿವಸದ ಹಿಂದೆ ಆಗಿರುವ ಘಟನೆ ಇದು. ಈಗಾಗಲೇ ರೈತರಿಗೆ ಚೆಕ್ ಮೂಲಕ ಕೊಡಬೇಕು ಅಂತ ಇದೆ. ಇವರು ರೈತರಿಗೆ ನೀವು ಸಹಿ ಮಾಡಿಕೊಡಿ, ಆ ಬ್ಯಾಂಕಿನಲ್ಲಿ ನಮ್ಮ ಗೃಹ ಮಂಡಳಿಯ ಖಾತೆ ಇದೆ, ಆ ಬ್ರ್ಯಾಂಚ್ ನಿಮ್ಮ ಮಾನ್ವಿಯಲ್ಲಿಲ್ಲ, ನಾವು ರಾಯಚೂರಿನಿಂದ cash ತಂದುಕೊಡುತ್ತೇವೆ ಅಂತ ಮೊದಲೇ ಎಲ್ಲ ರೈತರ ಸಹಿ ಮಾಡಿಸಿಕೊಂಡು ಹೋಗಿದ್ದಾರೆ. ಸಹಿ ಮಾಡಿರುವ ದಾಖಲೆ ಇಟ್ಟುಕೊಂಡು 5.30 ಲಕ್ಷ ಅವರು ಕಲೆಕ್ಟ್ ಮಾಡಿಕೊಂಡು ಒಂದು ಲಕ್ಷ ರೂ. ಮಾತ್ರ payment ಮಾಡಿದ್ದಾರೆ. 90 ಎಕರೆಗೆ ಈ ತರಹ ಮಾಡಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ :– ಇದೆಲ್ಲ ಅನುಭವವೇ. ಅಧ್ಯಕ್ಷರು ಹೇಳಿದಂತೆ ಯಾವುದಾದರೂ ಭೂ ಅಧಿಸೂಚನೆ ಪತ್ರಿಕೆಯಲ್ಲಿ ಬಂದ ಮಾರನೇ ದಿವಸವೇ ಅನೇಕ ವಕೀಲರು ಅವರ ಹತ್ತಿರ ಹೋಗಿ ಬಿಟ್ಟಿರುತ್ತಾರೆ. ನಾವೆಲ್ಲ ಖರ್ಚು ನೋಡಿಕೊಳ್ಳುತ್ತೇವೆ, ಸುಪ್ರೀಂ ಕೋರ್ಟ್‌ವರೆಗೆ ಹೋದರೂ ನೋಡಿಕೊಳ್ಳುತ್ತೇವೆ. ಹೆಚ್ಚಾಗಿದ್ದರಲ್ಲಿ ನಮಗೆ 25%, ಉಳಿದಿದ್ದು ನಿಮಗೆ ಅಂತ ಮಾತಾಡಿಕೊಂಡು ಬರುತ್ತಾರೆ. ಅನುಭವವಿದ್ದರೂ ನಾವು ಆತ್ಮ ವಂಚನೆ ಮಾಡಿಕೊಂಡು ಇಲ್ಲಿ ಮಾತನಾಡುತ್ತಿದ್ದೇವೆ. ಇದೊಂದು ದುರ್ದೈವದ ಸಂಗತಿ. ಆದರೆ ಬಿ.ಆರ್. ಪಾಟೀಲರು ಹೇಳಿದಂತೆ ಈ ಜಮೀನೇನಿದೆ 210 ಎಕರೆ

ಭೂಖರೀದಿ ಮಾಡಿ ಯೋಜನೆ ರೂಪಿಸಿದ್ದಾರೆ. ಇದರಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲೇ ಒಂದು ಸಭೆ ಮಾಡಿ ಸಭೆಯಲ್ಲಿ ಉಪ ನೋಂದಣಾಧಿಕಾರಿ, ಉಪ ಆಯುಕ್ತರು, ತಹಸೀಲ್ದಾರ್ ಮತ್ತು ಭೂಮಾಲೀಕರು ಇವರೆಲ್ಲರ ಸಮ್ಮುಖದಲ್ಲೇ ಒಂದು ಎಕರೆಗೆ 9.5 ಲಕ್ಷ ಕೊಡಬೇಕು ಅಂತ 4.12.2006 ರಂದು ತೀರ್ಮಾನ ಮಾಡಿ ಸರ್ಕಾರಕ್ಕೆ ಶಿಫಾರಸ್ಸು ಕಳಿಸಿಕೊಟ್ಟಿದ್ದಾರೆ. ಅದಾದ ಮೇಲೆ ಬೋರ್ಡಿನ ಮುಂದೆ ಈ ವಿಚಾರ ಚರ್ಚೆಗೆ ಬಂದಾಗ ಅವರು ಹೇಳಿದರು 16-2-2007 ರಂದು ಇದು CDP ಒಳಗೆ ಸೇರಿದೆ, 1.5 ಕಿ.ಮೀ ವ್ಯಾಪ್ತಿಯೊಳಗಿರುವಂಥದು. ಮತ್ತು ಇದು ವಸತಿ ಸಮುಚ್ಚಯಕ್ಕೆ ಅನುಕೂಲ ಅಂತ ಹೇಳಿ 8.90 ಲಕ್ಷ ರೂ.ಗೆ ಒಂದು ಎಕರೆಯಂತೆ ಖರೀದಿ ಮಾಡಬೇಕು ಅಂತ ಒಪ್ಪಿಗೆಯಾದ ಮೇಲೆ 23-3-2007 ರಂದು ಸರ್ಕಾರದ ಅನುಮೋದನೆ ಅದಕ್ಕೆ ಸಿಕ್ಕಿದೆ. ತಾವು ಹೇಳುತ್ತಿರುವುದು 1.25 ಲಕ್ಷಕ್ಕೆ ಕೊಂಡಿರುವ ಜಮೀನು ಗುಲ್ಬರ್ಗಾ ಶಹರದಿಂದ 17 ಕಿ.ಮೀನಲ್ಲಿರುವುದು, CDP ವ್ಯಾಪ್ತಿಯ ಹೊರಗಡೆ ಇರುವಂಥದು, ಅದಕ್ಕೆ ಬೆಲೆಯನ್ನು 2003 ರಲ್ಲಿ ನಿಗದಿ ಮಾಡಲಾಗಿದೆ, ಆದ್ದರಿಂದ ನೀವು ಹೇಳಿದಂತೆ ಅನುಮಾನಪಡಲು ಬೇಕಾದಷ್ಟು ಅವಕಾಶ ಇದೆ. ಆದರೆ ಅನುಮಾನ it can never take the position of proof. ಅದೇ ಬಂದಿರುವುದು. ಆ ಕಾರಣಕ್ಕಾಗಿ ನೀವು ಹೇಳಿದಂತೆ 2003 ರಲ್ಲಿದ್ದಂಥ ಬೆಲೆಯ ಆಧಾರದ ಮೇಲೆ ಸಿಡಿಪಿ ಯ ಹೊರಗಡೆ ಇರತಕ್ಕದ್ದು 15 ಕಿಲೋ ಮೀಟರ್ ದೂರ ಇರತಕ್ಕದ್ದಕ್ಕೆ ವಸತಿ ಸಮುಚ್ಚಯ ಆಗುವುದಿಲ್ಲ ಎನ್ನುವ ಕಾರಣಕ್ಕಾಗಿಯೇ.....

ಶ್ರೀ ಕೆ.ಆರ್. ರಮೇಶ್ ಕುಮಾರ್ :- 2007 ರಲ್ಲಿ ಇವರೇನು resolution ಅನ್ನು ಮಾಡುತ್ತಾರೆ, ಅದರ ಎರಡು - ಮೂರು ತಿಂಗಳು ಆಚೆ ಈಚೆ ಅಲ್ಲಿ Sub-Registrar office ನಲ್ಲಿ ಏನು ಮಾರ್ಕೆಟ್ value ಇದೆ, ಅದನ್ನು ತಿಳಿದುಕೊಂಡರೆ ಗೊತ್ತಾಗಿಬಿಡುತ್ತೆ.

ಶ್ರೀ ಎಂ.ಪಿ. ಪ್ರಕಾಶ್ :- ಆದರೆ Sub-Registrar value ಎನ್ನುವುದು ಎಷ್ಟು ಮೋಸವೆಂದರೆ ನಮ್ಮಲ್ಲಿರುವ ಮಾರ್ಕೆಟ್ ದರಕ್ಕೂ ನಾವು ಕಳುಹಿಸಿಕೊಡುವ ಮಾರ್ಗದರ್ಶನ ಸೂತ್ರದ ಕಡೆಗೆ.....

ಶ್ರೀ ಕೆ.ಆರ್. ರಮೇಶ್ ಕುಮಾರ್ :- ಜಾಲಪ್ಪನವರು ಇದ್ದಾಗ ಏನು ಮಾಡಿದರು ಎಂದರೆ ಹೀಗೆ ಮಾಡುತ್ತಾರೆಂದು ಹೇಳಿ ನೀವೇ ಇನ್ನು ಮುಂದೆ ಎಲ್ಲ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು minimum ಇಷ್ಟು ಇರಲೇಬೇಕು ಎಂದು, stamp duty ಗೆ ಹೊಡೆತ ಬೀಳುತ್ತೆ ಎಂದು ಮಾಡಿದ್ದರು. ತಮಗೆ ನೆನಪಿರಬಹುದು, ಜಾಲಪ್ಪನವರು ಇದ್ದಾಗ in fact, we have very good revenue through the Revenue

department for the first time. ಅಷ್ಟು revenue treasury ಗೆ ಬಂದದ್ದು ನೋಡಿ ಎಷ್ಟೊ ಕಾಲವಾಗಿ ಹೋಗಿತ್ತು. We have been now fixing the targets. Sub Registrar office ಅವರು ಕೊಟ್ಟಿದ್ದನ್ನು ನಾವು ಒಪ್ಪಿಕೊಳ್ಳುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :– ಅದು ಕೂಡ ಒಂದು ಉದಾಹರಣೆ ತಮಗೆ ಹೇಳುತ್ತೇನೆ. ಮಾರ್ಕೆಟ್ ದರವನ್ನು ನಿರ್ಣಯ ಮಾಡಿ ನಮ್ಮ ಜಾಲಪ್ಪನವರ ಕಾಲಕ್ಕೆ ಭೂ ಕಂದಾಯ ಅಧಿನಿಯಮಕ್ಕೆ ನಾವು ತಿದ್ದುಪಡಿಯನ್ನು ತಂದು ಆ ಮಾರ್ಗಸೂಚಿಯ ಬೆಲೆಯನ್ನೇ ಆಧಾರವಾಗಿ ಇಟ್ಟುಕೊಂಡು ಪ್ರತಿಯೊಂದು ಏರಿಯಾಗೂ declare ಮಾಡಿದೆವು. ಇಲ್ಲಿ ಗಾಂಧಿನಗರ ಏರಿಯಾ ಬೇರೆ. ಅಥವಾ ಯಶವಂತಪುರ ಏರಿಯಾದಲ್ಲಿರತಕ್ಕದ್ದೇ ಬೇರೆ. ಈ ತರಹದಲ್ಲಿ ಎಲ್ಲ ನಿಗದಿ ಮಾಡಿದೆವು. ಮುಂದೆ ಒಂದು ಸಂದರ್ಭದಲ್ಲಿ real estate ಬೆಲೆ ಬಿದ್ದುಹೋಯಿತು. ಬಿದ್ದು ಹೋದ ಸಂದರ್ಭದಲ್ಲಿ ಭೂ ನೋಂದಣಾಧಿಕಾರಿಗಳ ನಿರ್ಣಯ ಏನಿದೆ, ಮಾರ್ಗಸೂಚಿಯ ಬೆಲೆ, ಆ ಬೆಲೆಗೂ, ಮಾರ್ಕೆಟ್ ಬೆಲೆಗೂ ಕಡಿಮೆ ಇತ್ತು. ಆಗ ಮತ್ತೆ representation ಅನ್ನು ಕೊಟ್ಟರು. ಅದನ್ನು ಇನ್ನು consider ಮಾಡುತ್ತೇವೆ ಎನ್ನುವುದರೊಳಗಾಗಿ ಈಗ ನೂರಕ್ಕೆ ನೂರು ಹೆಚ್ಚಾಗಿಬಿಟ್ಟಿದೆ. ಈಗ ಮಾಡಿದಂಥದ್ದು ಕೂಡ ಹಳೆಯ ಪದ್ಧತಿಯಾಗಿಬಿಟ್ಟಿತು. ಈಗೇನು ನಾವು ನಿರ್ಣಯವನ್ನು ಮಾಡಿದ್ದೇವೆ, ಅದರ ಹತ್ತು ಪಟ್ಟು, ನೂರು ಪಟ್ಟು ಮಾರ್ಕೆಟ್ ದರ ಇದೆ. ಮತ್ತೆ ಅದನ್ನು ನಾವು ಬದಲಿ ಮಾಡಿಲ್ಲ. ಆ ಕಾರಣಕ್ಕಾಗಿಯೇ ಈ ಮಾರ್ಕೆಟ್ ದರ ಎನ್ನತಕ್ಕದ್ದು Sub-Registrar office ನಲ್ಲಿ ನಾವೆಲ್ಲರೂ ಒಂದಲ್ಲ ಒಂದು ರೀತಿಯಿಂದ ಸಣ್ಣ ತಪ್ಪುಗಳನ್ನು ಮಾಡುತ್ತಿರುತ್ತೇವೆ. ಇದು ತಮಗೂ ಕೂಡ ಗಮನಕ್ಕೆ ಬಂದಿದೆ. ಅದು ನಿಜವಾಗಿ ಹತ್ತು ಸಾವಿರ ರೂ.ಗೆ ಒಂದು ಎಕರೆ ತೆಗೆದುಕೊಂಡರೆ ಹಳ್ಳಿಯಲ್ಲಿ ಸಾವಿರ ರೂ. ಒಂದು ಎಕರೆ ಎಂದು ರಿಜಿಸ್ಟರ್ ಮಾಡಿಸುತ್ತೇವೆ. 12 ವರ್ಷದ ಸರಾಸರಿಯನ್ನು ತೆಗೆದುಕೊಂಡು ಅದರ ಮೇಲೆ ನಿರ್ಧಾರವನ್ನು ಮಾಡುತ್ತೇವೆ. ಇದು ಆಗಬಾರದೆಂದು ಈ ನಿರ್ಣಯ ಮಾಡಿದೆವು. ಎಲ್ಲಿಯವರೆಗೆ ನಮ್ಮಂಥ ಜಾಣರು ಉಪದೇಶ ಮಾಡಿ ದುಡ್ಡು ತೆಗೆದುಕೊಳ್ಳತಕ್ಕ ವಕೀಲರುಗಳ ವೇಷದಲ್ಲಿಯೋ ಮತ್ತೊಂದು ವೇಷದಲ್ಲಿಯೋ ಅಥವಾ ಮಧ್ಯವರ್ತಿ ರಾಜಕಾರಣಿಗಳಿಗಾಗಿ ರಾಮಕೃಷ್ಣ ಲಾಡ್ಜ್‌ನಲ್ಲಿ ಕಾರ್ಡ್ ರೂಮನ್ನು ಮಾಡಿಕೊಂಡಿರುತ್ತೇವೆ, ಅಲ್ಲಿಯವರೆಗೆ ಕೂಡ ಇದೆಲ್ಲ ಶೋಷಣೆ ನಡೆದೇ ನಡೆಯುತ್ತದೆ. ಅಮಾಯಕ ಈ ದೇಶದಲ್ಲಿ ತೊಂದರೆಯನ್ನು ಖಂಡಿತವಾಗಿ ಅನುಭವಿಸುತ್ತಾನೆ.

(ಮುಂದಲ)

ಶ್ರೀ ಬಿ.ಆರ್. ಪಾಟೀಲ್ :- ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಸತ್ಯವನ್ನು ಒಪ್ಪಿಕೊಂಡಿದ್ದಾರೆ. ಮತ್ತು ಇದಕ್ಕೆ ಕ್ರಮವೇನು ಎಂದು ಹೇಳದೇ ಹೋದರೆ ಸರ್ಕಾರ ಏಕೆ ಇರಬೇಕು? ಎಲ್ಲ ವಾಸ್ತವಿಕತೆಯನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಸರ್ಕಾರ ಸತ್ಯವನ್ನು ಅರಿತಮೇಲೂ ಕೂಡ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಇನ್ನೇನು ಅರ್ಥ. ಇದು ಎಲ್ಲ ಅನುಮಾನಗಳಿಗೂ ಎಡೆಮಾಡಿಕೊಡುತ್ತೆ ಎಂದು ಹೇಳಿದ್ದಾರೆ. ಇದನ್ನು ತನಿಖೆ ಮಾಡುತ್ತೀರೊ?

ಅಧ್ಯಕ್ಷರು :- ಆಯಿತ್ರೀ ಪಾಟೀಲರೇ, ಈ ಪ್ರಶ್ನೆ 15 ನಿಮಿಷ ಚರ್ಚೆಯಾಗಿದೆ.

ಶ್ರೀ ಬಿ.ಆರ್. ಪಾಟೀಲ್ :- ಮಧ್ಯದಲ್ಲಿ ಅವರುಗಳು interfere ಮಾಡಿದರು.

ಅಧ್ಯಕ್ಷರು :- ಸುಮ್ಮನೆ ನಿಂತುಕೊಂಡರೆ ಹೇಗೆ?

ಶ್ರೀ ಬಿ.ಆರ್. ಪಾಟೀಲ್ :- ನಾನು ಸತ್ಯಾಂಶವನ್ನು ಹೇಳುವುದಕ್ಕೆ ಅವರು ಅವಕಾಶವನ್ನು ಮಾಡಿಕೊಡಲಿಲ್ಲ. ಯಾವುದೋ ಒಂದು ಜಮೀನಿಗೆ ಯಾರದ್ದೋ ಅನುಕೂಲಕ್ಕಾಗಿ ಆ ಬೆಲೆಯನ್ನು ಕೊಟ್ಟು ಖರೀದಿ ಮಾಡಿರುತ್ತಾರೆ. ಆ 210 ಎಕರೆ ಪ್ರದೇಶಕ್ಕೆ ಅಂಟಿಕೊಂಡ ಆ ಜಮೀನನ್ನು ತೆಗೆದುಕೊಂಡು ಈ Sub-Registrar ಅದನ್ನು DC ಗೆ ವರದಿ ಒಪ್ಪಿಸಿ ಇಲ್ಲಿ ಒಬ್ಬರು SLO ಇದ್ದಾರೆ ಹೌಸಿಂಗ್ ಬೋರ್ಡ್‌ನಲ್ಲಿ, ಇವರದೊಂದು ದೊಡ್ಡ collusion ಇದೆ. ಆಮೇಲೆ ನಮ್ಮ ಭೋಸರಾಜುರವರು ಹೇಳಿದ ಹಾಗೆ ಇದಕ್ಕೆ Gang ಗಳಿದ್ದಾವೆ. ದಯಮಾಡಿ ನಿಮ್ಮಂಥ ಪ್ರಾಮಾಣಿಕರು ಇದರ ಬಗ್ಗೆ ಸ್ವಲ್ಪ ಕಾಳಜಿಯನ್ನು ವಹಿಸಿ ಏನಾದರೂ ಮಾಡಿದರೆ ಈ ಸತ್ಯ ಹೊರಗೆ ಬರುತ್ತದೆ. ಆಮೇಲೆ ರೈತರಿಗೂ ಎಷ್ಟು ದುಡ್ಡು ಸಿಕ್ಕಿದೆ ಎಂದು ತನಿಖೆಯಾಗಲಿ. ವಾಸ್ತವಿಕವಾಗಿ ದುಡ್ಡಿ ಸಿಕ್ಕಿದೆಯೋ ಅಥವಾ registration value ವನ್ನು ಯಾವ ಆಧಾರದ ಮೇಲೆ ಮಾಡಿದ್ದಾರೆ, ಇದರ ಬಗ್ಗೆ ಒಂದು ತನಿಖೆಯಾಗಲಿ. ಇದು ಸರ್ಕಾರದ ದುಡ್ಡು. ನಾಳೆ ಇದು consumer ಮೇಲೆ ಬೀಳುತ್ತದೆ. ಇದನ್ನು ನಾವು ನೀವು ಕೊಡುವುದಿಲ್ಲ. Ultimately, Housing Board consumer ಮೇಲೆ ಬೀಳುತ್ತದೆ. ರೈತರಿಗೂ ಅನುಕೂಲವಾಗುವುದಿಲ್ಲ, ಇದರಿಂದ ಯಾರಿಗೂ ಅನುಕೂಲವಾಗುವುದಿಲ್ಲ. ಮಾನ್ಯ ಮಂತ್ರಿಗಳು ಇದನ್ನು ತನಿಖೆ ಮಾಡುತ್ತಾರೆಯೇ ಎಂದು ಹೇಳಲಿ.

ಶ್ರೀ ಎಂ.ಪಿ. ಪ್ರಕಾಶ್ :- ಈ ವ್ಯವಹಾರದಲ್ಲಿ ಅಕ್ರಮವಾಗಿದೆ ಎಂದು ನಾನು ಹೇಳೇ ಇಲ್ಲ. ಸಾಮಾನ್ಯವಾಗಿರತಕ್ಕ ಅನೇಕ ಚರ್ಚೆಗಳು ಬಂದಾಗ ಈ ತರಹ ಆಗುತ್ತದೆಂದು ಹೇಳಿದೆ. ಆದರೆ ಈ ವ್ಯವಹಾರದಲ್ಲಿ 8,90,000 ರೂ. ಕೊಟ್ಟಿರತಕ್ಕದ್ದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದಿರತಕ್ಕದ್ದರಲ್ಲಿ ಉಪ ಆಯುಕ್ತರು, ತಹಶೀಲ್ದಾರ್, ಮತ್ತು

ನೋಂದಣಾಧಿಕಾರಿಗಳು, ಅವರೆಲ್ಲರೂ ಕಲೆತು ನಿರ್ಣಯ ಮಾಡಿದ್ದು ಒಂಭತ್ತೂವರೆ ಲಕ್ಷ ರೂ.ಗಳಿಗೆ ನಿರ್ಣಯವನ್ನು ಮಾಡಿದ್ದರು. ಅದಾದ ನಂತರ ಬೋರ್ಡ್ ಮುಂದೆ ಈ ವಿಚಾರ ಬಂತು. ಬೋರ್ಡ್‌ನಲ್ಲಿ ಒಂಭತ್ತೂವರೆ ಲಕ್ಷದ ಬದಲು 8,90,000 ಲಕ್ಷ ರೂ. ಎಂದು ನಿರ್ಣಯವನ್ನು ಮಾಡಿದರು. ಅದಕ್ಕೆ ಕೊಟ್ಟಿರತಕ್ಕ ಕಾರಣಗಳು ಇದು ಸಿಡಿಪಿ ಒಳಗಡೆ ಇರತಕ್ಕದ್ದು, ಕೇವಲ 1.5 ಕಿಲೋ ಮೀಟರ್ ದೂರದಲ್ಲಿರತಕ್ಕದ್ದು, ವಸತಿ ಸಮುಚ್ಚಯಕ್ಕೆ ಇದು ತೀರಾ ಅಗತ್ಯ ಮತ್ತು ಅನಿವಾರ್ಯ ಎನ್ನುವ ಕಾರಣಕ್ಕಾಗಿ ನಿರ್ಧಾರ ಮಾಡಿದ್ದೇವೆ. ತಾವು ಪ್ರಸ್ತಾಪ ಮಾಡಿರತಕ್ಕದ್ದಕ್ಕೆ ಕೆಐಎಡಿಬಿ ತೆಗೆದುಕೊಂಡಿರತಕ್ಕ ಭೂಮಿಯ ಬೆಲೆ 2003 ರಲ್ಲಿ ಆಗಿರತಕ್ಕದ್ದು, ಅದು 15 ಕಿಲೋ ಮೀಟರ್ ದೂರ ಇರತಕ್ಕದ್ದು, ಸಿಡಿಪಿಯ ಹೊರಗಡೆ ಇರತಕ್ಕದ್ದು, ಆ ಕಾರಣಕ್ಕಾಗಿ ಅವತ್ತಿನ ಬೆಲೆಯಲ್ಲಿ 1.25 ಲಕ್ಷ ರೂ.ಗಳನ್ನು ಬಿಟ್ಟಿದ್ದಾರೆ. ಇಲ್ಲಿ ಯಾವ ಅವ್ಯವಹಾರಗಳೂ ಕೂಡ ಆಗಿಲ್ಲ.

ಶ್ರೀ ಬಿ.ಆರ್. ಪಾಟೀಲ್ :– ನಾವು ಕೋರ್ಟಿನ ಮೆಟ್ಟಿಲನ್ನು ಹತ್ತುತ್ತೇವೆ. ನಾವು ಕೋರ್ಟಿಗೆ ಹೋಗುತ್ತೇವೆ.

ಶಿಕ್ಷಕರ ವರ್ಗಾವಣೆ ಆದೇಶ

366 (2510) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06ನೇ ಸಾಲಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆ ಆಗಿದ್ದರೂ ಇದುವರೆಗೂ ಕಾರ್ಯರೂಪಕ್ಕೆ ಬಾರದಿರಲು ಕಾರಣವೇನು;

ಆ) ಹಾಗಿದ್ದಲ್ಲಿ, ಈ ವರ್ಗಾವಣೆ ಆದೇಶವನ್ನು ಯಾವಾಗ ಜಾರಿ ಮಾಡಲಾಗುವುದು;

ಇ) ಈ ವರ್ಗಾವಣೆ ಆದೇಶವನ್ನು ಜಾರಿ ಮಾಡದಿರುವುದರಿಂದ ಶಿಕ್ಷಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 2005–06ನೇ ಸಾಲಿನಲ್ಲಿ ಯಾವುದೇ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆಗಳು ಬಾಕಿಯಿರುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಇಲ್ಲಿ ಶಿಕ್ಷಕರು ಎಂದರೆ ಗುರುಗಳು ಎನ್ನುವ ಭಾವನೆ. ವಿದ್ಯೆಯನ್ನು ಹೇಳತಕ್ಕ ಗುರುಗಳು." ಗುರು ಬ್ರಹ್ಮ, ಗುರು ವಿಷ್ಣು, ಗುರುದೇವೊ ಮಹೇಶ್ವರ;, ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ, "ಅಂದರೆ ಗುರುವನ್ನು